ಮಾಡುತ್ತಿದ್ದವು. ಅಲ್ಲೇ ಆಡಿ ಖುಷಿ ಪಡುತ್ತಿದ್ದವು.

ಒಂದು ದಿನ ಭಾರೀ ಮಳೆ ಸುರಿಯಿತು. ಮಳೆಯ ರಭಸಕ್ಕೆ ಪರ್ವತದ ಮೇಲೆ ಇದ್ದ ಮರಗಳು ಜಾರಿ ತೊರೆಯಲ್ಲಿ ಸಾಗಿ ಬಂದವು. ಇದರಿಂದ ತೊರೆಯಲ್ಲಿ ನೀರು ಸರಿಯಾಗಿ ಹರಿಯದೇ ಪರ್ವತದ ಬುಡದಲ್ಲಿ ನೀರಿನ ಮಟ್ಟ ಹೆಚ್ಚಳ ಆಗತೊಡಗಿತು. ಆಗ ಅಪಾಯದ ಸೂಚನೆ ಅರಿತ ಇಲಿಗಳು ಅಲ್ಲಿಂದ ಪಲಾಯನ ಮಾಡಲು ಮುಂದಾದವು.

ತಾಯಿ ಇಲಿ, 'ಪರ್ವತವೇ, ಕ್ಷಣ ಕ್ಷಣಕ್ಕೂ ನೀರು ಹೆಚ್ಚು ಆಗುತ್ತಾ ಇದೆ. ನಮ್ಮ ಬಿಲದ ಒಳಗೆ ನೀರು ನುಗ್ಗುತ್ತಿದೆ. ನಾವು ಈಗ ಇಲ್ಲಿಂದ ಹೊರಡುತ್ತೇವೆ. ನಮಗೆ ನಿನ್ನಷ್ಟು ಶಕ್ತಿ, ಗಾತ್ರ ಇಲ್ಲ. ಬಿಲದೊಳಗೆ ನೀರು ಇನ್ನೂ ಹೆಚ್ಚಾದರೆ ನೀನು ಕುಸಿದು ಬೀಳುತ್ತೀ. ಆದಷ್ಟು ಬೇಗ ಏನಾದರೂ ಉಪಾಯ ಮಾಡಿ ನಿನ್ನನ್ನು ಕಾಪಾಡಿಕೋ' ಎಂದಿತು.

ಆಗ ಪರ್ವತವು ಇಲಿಯ ಬಳಿ ತನ್ನ ಅಸಹಾಯಕತೆಯನ್ನು ತೋಡಿಕೊಂಡಿತು.

'ನಾನು ಬಲಿಷ್ಠ, ಗಾತ್ರದಲ್ಲಿ ದೊಡ್ಡವ ನಿಜ. ಆದರೆ ನಿನ್ನ ಹಾಗೆ ನನಗೆ ಓಡಾಡಲು ಸಾಧ್ಯವಿಲ್ಲ. ದಯವಿಟ್ಟು ನನಗೆ ಸಹಾಯ ಮಾಡು. ಬಿಲದ ಒಳಗೆ ನೀರು ನುಗ್ಗದಂತೆ ಕಾಪಾಡು' ಎಂದು ಗೋಗರೆಯಿತು.

ಪರ್ವತದ ಸ್ಥಿತಿ ನೋಡಿ ಇಲಿಗೆ ಬಹಳ ಬೇಸರ ಆಯಿತು. ಆದರೆ ತಾನು ಗರ್ಭಿಣಿ ಇದ್ದಾಗ ಅದು ತೋರಿದ ಅಹಂಕಾರ ಕಣ್ಣ ಮುಂದೆ ಬಂತು. ಪರ್ವತಕ್ಕೆ ಸಹಾಯ ಮಾಡೋಣ ಎನ್ನುವ ಮನಸ್ಸು ಇಲಿಗೆ ಬಂದರೂ ಆಗ ಕಾಲ ಮೀರಿತ್ತು. ತೊರೆಯ ನೀರು ಪರ್ವತದ ಬಿಲದ ಒಳಗೆ ಹೊಕ್ಕು ಪರ್ವತ ಕುಸಿಯಲು ಆರಂಭಿಸಿತು. ಇನ್ನು ಇಲ್ಲಿ ಇದ್ದರೆ ಯಾವುದೇ ಪ್ರಯೋಜನ ಇಲ್ಲ ಎಂದು ಅರಿತು ಇಲಿಗಳ ಸಮೂಹ ಅಲ್ಲಿಂದ ಸುರಕ್ಷಿತ ಪ್ರದೇಶಕ್ಕೆ ತೆರಳಿದವು.

ಮಳೆಯ ಬಿರುಸು ಹೆಚ್ಚಾಗುತ್ತಾ ಹೋದ ಕಾರಣ ಪರ್ವತದ ತಳ ನೀರಿನಿಂದ ಸಂಪೂರ್ಣ ಆವೃತ ಆಯಿತು. ಪರ್ವತದ ಒಂದೊಂದೇ ಭಾಗ ಕುಸಿದು ನೆಲಸಮ ಆಯಿತು. ಅಲ್ಲಿ ಪರ್ವತ ಇತ್ತು ಎನ್ನುವುದು ಮರೆತೇ ಹೋಗುವಂತೆ ಅನಾಹುತ ಉಂಟಾಯಿತು.

ತನ್ನ ಶಕ್ತಿ, ಭವ್ಯತೆ ಕಳೆದುಕೊಂಡ ಪರ್ವತ ಮರುಗಿತು. ಇಲಿಯನ್ನು ತಾತ್ಸಾರವಾಗಿ ನೋಡಲು ಹೋಗಿದ್ದೇ ಈ ಅನಾಹುತಕ್ಕೆ ಕಾರಣ ಎಂದು ದುಃಖ ಪಟ್ಟಿತು. ಸುರಕ್ಷಿತ ಪ್ರದೇಶಕ್ಕೆ ವಲಸೆ ಹೋದ ಇಲಿಗಳು ಯಾವುದೂ ಅಸಾಧ್ಯ ಅಲ್ಲ. ಮನಸು ಮಾಡಿದರೆ ಬೆಟ್ಟವನ್ನೂ ಕರಗಿಸಬಹುದು ಎಂದು ತೋರಿಸಿದವು. ■



# ಬೆಕ್ಕಿನ ಕಣ್ಣಿನ ಅಕ್ಕ

■ ಡಾ. ಕೆ.ಬಿ. ರಂಗಸ್ವಾಮಿ

ಚಿತ್ರ: ಸಂತೋಷ್ ಸಸಿಹಿತ್ಲು

ಬೆಕ್ಕಿನ ಕಣ್ಣಿನ ಚೆಲುವೆಯಿವಳು
ನನ್ನ ಪ್ರೀತಿಯ ಅಕ್ಕ
ಸದಾ ಗಸ್ತು ಹೊಡೆವೆ ನಾನು
ಅವಳ ಅಕ್ಕಪಕ್ಕ

ಪುಟ್ಟ ಬಾಯಿ ತೆರೆದ ಒಡನೆ
ಮಿನುಗುವುದವಳ ದಂತಪಂಕ್ತಿ
ಸಕ್ಕರೆಯ ಮಾತಿನಲಿ
ತೋರುವಳು ಕಕ್ಕುಲಾತಿ

ಸಂಪಿಗೆಗೂ ಸೆಡ್ಡು ಹೊಡೆವ
ಮೂಗು ಬಹಳ ಸುಂದರ
ಬಿರಿದ ಮೊಲ್ಲೆ ಹೂವಿನಂತೆ
ಅವಳ ನಗುವ ಅಧರ

ನಿದಿರೆ ಬರುವ ಕ್ಷಣದಲಿ
ಅವಳ ಮಡಿಲೇ ಸುಪ್ಪತ್ತಿಗೆ
ಬೆನ್ನು ತಟ್ಟಿ ಜೋ ಜೋ ಎನಲು
ಹೋಗುವೆ ಕನಸಲೋಕಕೆ

ತಿಳಿನೀರ ಕೊಳದಂತೆ
ಚೊಕ್ಕ ಮನಸು ಅವಳದು
ಎಲ್ಲರಿಗೂ ಪ್ರಿಯಳು ಅವಳು
ಸುಳಿದೆಡೆ ಸಗ್ಗ ಇಳಿಯುವುದು! ■

## ಕುಂಚ ಪ್ರಪಂಚ





**ಮಹಿಮ ಆರ್.ಕೆ.**
10ನೇ ತರಗತಿ, ವಿಠ್ಠಲ್ ಜೇಸೀಸ್ ಆಂಗ್ಲ ಮಾಧ್ಯಮ ಶಾಲೆ, ವಿಟ್ಲ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in